198	ಯಲಬುರ್ಗಾ	10	–	10	11	–	11
199	ಕೊಪ್ಪಳ	22	–	22	7	–	7
	ಒಟ್ಟು	**2626**	**633**	**1993**	**572**	**000**	**572**

ಅಲ್ಪ ಸಂಖ್ಯಾತರ ಮುಸ್ಲಿಂ ವಸತಿ ಶಾಲೆಗಳು:

532 (1112) ಶ್ರೀ ಖಾದರ್ ಯು.ಟಿ (ಮಂಗಳೂರು) ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿ ನಡೆಯುತ್ತಿರುವ ಅಲ್ಪಸಂಖ್ಯಾತರ ಮುಸ್ಲಿಂ ವಸತಿ ಶಾಲೆಗಳ ಸಂಖ್ಯೆ ಎಷ್ಟು? ಅವುಗಳು ಯಾವ ಇಲಾಖೆಯ ಉಸ್ತುವಾರಿಯಲ್ಲಿ ನಡೆಯುತ್ತಿವೆ: ಅವುಗಳು ಯಾವ ಸ್ಥಳಗಳಲ್ಲಿವೆ (ವಿವರ ಒದಗಿಸುವುದು);

(ಆ) ಈ ಅಲ್ಪಸಂಖ್ಯಾತರ ವಸತಿ ಶಾಲೆಗಳಿಗೆ ಶಾಶ್ವತ ಕಟ್ಟಡಗಳು ಇವೆಯೇ?

(ಇ) ಅಲ್ಪಸಂಖ್ಯಾತರ ಮುಸ್ಲಿಂ ವಸತಿ ಶಾಲೆಗಳ ಉಸ್ತುವಾರಿಯನ್ನು ಶಿಕ್ಷಣ ಇಲಾಖೆಗೆ ವಹಿಸುವುದರಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಪ್ರೊ. ಡಾ. ಮುಮ್ತಾಜ್ ಅಲಿಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):–

(ಅ) ಸರ್ಕಾರಿ ಆದೇಶ ಸಂಖ್ಯೆ: ಸಕಇ 153/ಮೊದೇಶಾ/2009, ದಿ:13/01/2010ರಲ್ಲಿ ಶಿಕ್ಷಣ ಇಲಾಖೆಯಿಂದ ಸಮಾಜ ಕಲ್ಯಾಣ ಇಲಾಖೆಗೆ ವರ್ಗಾವಣೆ ಆಗಿರುವ 5 ವಸತಿ ಶಾಲೆಗಳನ್ನು 2010–11ನೇ ಸಾಲಿನಿಂದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ವರ್ಗಾಯಿಸಿ ಆದೇಶಿಸಿದೆ.

5. ಮುಸ್ಲಿಂ ವಸತಿ ಶಾಲೆಗಳು ಈ ಕೆಳಕಂಡ ಸ್ಥಳದಲ್ಲಿವೆ.

ಕ್ರ.ಸಂ	ಜಿಲ್ಲೆ	ಸ್ಥಳ
1	ರಾಮನಗರ	ರಾಮನಗರ
2	ಮಂಡ್ಯ	ಶ್ರೀರಂಗಪಟ್ಟಣ
3	ಬಿಜಾಪುರ	ಬಿಜಾಪುರ
4	ಗುಲ್ಬರ್ಗಾ	ಗುಲ್ಬರ್ಗಾ
5	ದಕ್ಷಿಣ ಕನ್ನಡ	ಮಂಗಳೂರು ಕೋಟೇ ಕಾರ್

(ಆ) ಬಿಜಾಪುರದಲ್ಲಿ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. 4 ವಸತಿ ಶಾಲೆಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ.

(ಇ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಕೆ.ಎಸ್.ಆರ್.ಟಿ.ಸಿ, ಮತ್ತು ಬಿ.ಎಂ.ಟಿ.ಸಿ ಗೆ ಹೊಸ ಬಸ್‌ಗಳ ಖರೀದಿ

533 (1120) ಶ್ರೀ ಖಾದರ್ ಯು.ಟಿ (ಮಂಗಳೂರು) ಮಾನ್ಯ ಸಾರಿಗೆ ಹಾಗೂ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿ ಕೆ.ಎಸ್.ಆರ್.ಟಿ.ಸಿ ಮತ್ತು ಬಿ.ಎಂ.ಟಿ.ಸಿ. ಸಂಸ್ಥೆಗಳಿಗೆ ಯಾವ ಯಾವ ಯೋಜನೆಯಡಿಯಲ್ಲಿ ಬಸ್‌ಗಳನ್ನು ಖರೀದಿಸಲಾಗುತ್ತಿದೆ: (2008–09 ಮತ್ತು 2009–10ನೇ ಸಾಲಿಗೆ ಅನ್ವಯಿಸುವಂತೆ):

(ಆ) ಯಾವ ಮಾದರಿಯ ವಾಹನಗಳನ್ನು ಖರೀದಿಸಲಾಗುತ್ತಿದೆ; (ಮೌಲ್ಯವಾರು ವಿವರ ನೀಡುವುದು);

(ಇ) ಈ ರೀತಿ ಬಸ್ ಖರೀದಿಗೆ ನರ್ಮ್ ಪ್ರಾಜೆಕ್ಟ್‌ನಲ್ಲಿ ರಾಜ್ಯ ಸರ್ಕಾರದ ಪಾಲು ಮತ್ತು ಕೇಂದ್ರ ಸರ್ಕಾರದ ಪಾಲು ಎಷ್ಟು?

ಶ್ರೀ ಆರ್. ಅಶೋಕ್ (ಸಾರಿಗೆ ಹಾಗೂ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು):–